ಅ) ವಾರ್ಷಿಕವಾರು ಅನುದಾನ ಬಿಡುಗಡೆ

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಮಹಾನಗರ ಪಾಲಿಕೆಗಳು	1999-2000	2000- 2001	2001-2002
1.	ಬೆಂಗಳೂರು	9022.62	8267.70	6648.04
2.	ಗುಲ್ಬರ್ಗಾ	896.00	896.00	896.00
3.	ಮಂಗಳೂರು	1037.21	1537.76	1112.42
4.	ಹುಬ್ಬಳ್ಳಿ - ಧಾರವಾಡ	2413.63	4369.88	2615.94
5.	ಬೆಳಗಾವಿ	1662.82	1667.99	959.10
6.	ಮೈಸೂರು	1234.87	1388.00	1339.05

ಆ)

ಕ್ರಮ ಸಂಖ್ಯೆ	ಮಾನದಂಡ	ಸಿದ್ಧಾಂತ ಹಾಗೂ ಪರಿಮಾಣ ಶೇಕಡವಾರು
1.	ಪಟ್ಟಣದ ವಿಸ್ತೀರ್ಣ (ಚದರ ಕಿ.ಮೀಗಳಲ್ಲಿ)	33.33
2.	ಪಟ್ಟಣದ ಜನಸಂಖ್ಯೆ ಶೇಕಡವಾರು	33.33
3.	ಅಕ್ಷರಸ್ಥರು	11.11
4.	ರಸ್ತೆಯ ಉದ್ದ (ಕಿ.ಮೀಗಳಲ್ಲಿ)	11.12
5.	ಆಸ್ಪತ್ರೆಯಲ್ಲಿ ಹಾಸಿಗೆಯ ಅನುಪಾನ	11.11

ಇ)

ಕ್ರಮ ಸಂಖ್ಯೆ	ಮಹಾನಗರಪಾಲಿಕೆಗಳು	ವಿಸ್ತೀರ್ಣ	ಜನಸಂಖ್ಯೆ
1.	ಬೆಂಗಳೂರು	225 ಚದರ ಕಿ.ಮೀ	4292223
2.	ಗುಲ್ಬರ್ಗಾ	55.15 ಚದರ ಕಿ.ಮೀ.	430000
3.	ಮಂಗಳೂರು	132.45 ಚದರ ಕಿ.ಮೀ	418500
4.	ಹುಬ್ಬಳ್ಳಿ - ಧಾರವಾಡ	202.28 ಚದರ	4032270
5.	ಬೆಳಗಾವಿ	92.8 ಚದರ ಕಿ.ಮೀ	399600
6.	ಮೈಸೂರು	128.42 ಚದರ ಕಿ.ಮೀ	785800

ಈ) "ಆ" ನಲ್ಲಿ ವಿವರಿಸಿರುವ ಮಾನದಂಡದ ಆಧಾರದ ಮೇಲೆ ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದೆ.

ಮೈಸೂರು ನಗರಕ್ಕೆ ಕಬಿನಿ ನದಿಯಿಂದ ನೀರು ಬಿಡುಗಡೆ

2129 (2485) - ಶ್ರೀ ಎಸ್.ಹೆಚ್. ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಕ್ಕೆ ಕಬಿನಿ ನದಿಯಿಂದ ನೀರು ಸರಬರಾಜು ಮಾಡಲು ಯೋಜನೆಯ ಅಂದಾಜು ವೆಚ್ಚ ಎಷ್ಟು?

ಆ) ಈ ಯೋಜನೆ ಜಾರಿಗೊಂಡಲ್ಲಿ ನಗರದ ಯಾವ ಯಾವ ಬಡಾವಣೆಗಳಿಗೆ ಎಷ್ಟು ಪ್ರಮಾಣದ ನೀರು ಸರಬರಾಜು ಮಾಡಬಹುದಾಗಿದೆ.

ಇ) ಈ ಯೋಜನೆಯನ್ನು ಜಾರಿಗೊಳಿಸುವ ವಿಚಾರದಲ್ಲಿ ಸರ್ಕಾರದನ ನಿಲುವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಮೈಸೂರು ನಗರಕ್ಕೆ ಕಬಿನಿ ನದಿಯಿಂದ ಸರಬರಾಜು ಮಾಡುವ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆದ್ದರಿಂದ ಯೋಜನೆಯ ವೆಚ್ಚದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಯಲಹಂಕ ನಗರ ಸಭೆ ವ್ಯಾಪ್ತಿಗೆ ಬರುವ ರಸ್ತೆಗಳ ಅಭಿವೃದ್ಧಿ

2130 (2583) - ಶ್ರೀ ಶಿವಶಂಕರ್ ರೆಡ್ಡಿ ಎನ್. ಹೆಚ್. (ಗೌರಿಬಿದನೂರು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಲಹಂಕ ನಗರಸಭೆ ವ್ಯಾಪ್ತಿಗೆ ಬರುವ ಉಪನಗರದ ಡೈರಿ ಕ್ರಾಸ್‌ನಲ್ಲಿ ವಾಹನ ದಟ್ಟಣೆ ಹಾಗೂ ಜನ ಸಂಚಾರ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸಂಚಾರ ಸುಗಮಗೊಳ್ಳಲು ಪಾದಚಾರಿ ರಸ್ತೆಯ ಮೇಲಿರುವ ವಿದ್ಯುತ್ ದ್ವೀಪಗಳ ಕಂಬ ಪಟ್ಟಿ ಅಂಗಡಿಗಳನ್ನು ಸ್ಥಳಾಂತರಿಸಿ, ರಸ್ತೆಯನ್ನು ಅಗಲಗೊಳಿಸಿ ಅಭಿವೃದ್ಧಿಗೊಳಿಸಲು ಡೈರಿ ಕ್ರಾಸ್‌ನಿಂದ , 4 ಮತ್ತು 5 ನೇ ಹಂತದ ಬಡಾವಣೆಗಳ ಪಾದಚಾರಿ ರಸ್ತೆಗಳು ಹಾಗೂ ಎಲ್ಲಾ ತಿರುವುಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಸಂಚಾರ ಸುಗಮಗೊಳಿಸಲು ಪಾದಚಾರಿ ರಸ್ತೆಯಲ್ಲಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಕೆ.ಪಿ.ಟಿ.ಸಿ.ಎಲ್. ರವರಿಗೆ ಪತ್ರ ವ್ಯವಹಾರ ಮಾಡಲಾಗುವುದು. ಪೆಟ್ಟಿಗೆ ಅಂಗಡಿಗಳನ್ನು ಸ್ಥಳಾಂತರಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲು ಬಿ.ಎಂ.ಟಿ.ಎಫ್. ರವರಿಗೆ ಪತ್ರ ಬರೆಯಲಾಗಿದೆ. ಹಾಗೂ ತಿರುವು ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಸದ್ಯಕ್ಕೆ ನಗರಸಭೆಗೆ ಹಣಕಾಸಿನ ತೊಂದರೆ ಇರುವುದರಿಂದ, ಹಣಕಾಸಿನ ಸೌಲಭ್ಯತೆ ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ವರದಿಯ ಅನುಷ್ಠಾನ

2131 (2521) - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?